ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: ಗೃಹ - CD ಪ್ರಕರಣ

ಪತ್ರಿಕೆಯ ಹೆಸರು : NAME OF THE NEWS PAPER: ಸಂಯುಕ್ತ ಕರ್ನಾಟಕ ದಿನಾಂಕ : DATE : 16/3/21

# ಎಸ್ಐಟಿ ತನಿಖೆ ನಿಗೂಢದ ಮೊಟ್ಟೆ

## ಕಾಂಗ್ರೆಸ್ ತಬ್ಬಿಬ್ಬು । ಸರ್ಕಾರದ ನಿಟ್ಟುಸಿರು

- ಖಾಸಗಿ ಜಾಹಿರಾತು ಸಂಸ್ಥೆ ಮೇಲೆ ದಾಳಿ
- ಜಾರಕಿಹೊಳಿ ಸಹೋದರರು ಮೌನ
- ಸಿಎಂ ಪುತ್ರನ ಮೇಲೆ ಯತ್ನಾಳ ಶಂಕೆ

ಸಂ.ಕ.ಸಮಾಚಾರ, ಬೆಂಗಳೂರು 16/3/21

ಮಾಜಿ ಸಚಿವ ರಮೇಶ್ ಜಾರಕಿಹೊಳಿ ವಿರುದ್ಧದ ಸಿ.ಡಿ. ಹಗರಣ ಕುರಿತಂತೆ ಪ್ರತಿಪಕ್ಷ ಕಾಂಗ್ರೆಸ್ ಸೋಮವಾರ ವಿಧಾನಮಂಡಲದಲ್ಲಿ ವಿಷಯವನ್ನೇ ಪ್ರಸ್ತಾಪಿಸದೇ ಮೌನಕ್ಕೆ ಜಾರಿದರೆ, ಅತ್ತ ತನಿಖೆಯ ಹೊಣೆ ಹೊತ್ತ ಎಸ್ಐಟಿ ಕೂಡ ದಿನವಿಡೀ ಗುಪ್ತ ಕಾರ್ಯಾಚರಣೆಯಲ್ಲೇ ಮಗ್ನವಾಗಿತ್ತು. ಪ್ರಕರಣದಲ್ಲಿ ಎಫ್ಐಆರ್ ದಾಖಲಾಗಿ ಮೂರು ದಿನಗಳೇ ಕಳೆದರೂ ಎಸ್ಐಟಿ ಯಾರನ್ನೂ ಬಂಧಿಸಿಲ್ಲ. ಮತ್ತೊಂದೆಡೆ ಅಜ್ಞಾತ ಸ್ಥಳದಿಂದ ವಿಡಿಯೋ ಬಿಡುಗಡೆ ಮಾಡಿ, ಸಂತ್ರಸ್ತೆ ಹೇಳಿಕೆ ನೀಡಿದರೂ ಈ ತನಕ ಆಕೆಯ ಹೇಳಿಕೆಯ ಮೇಲೆ ಯಾವುದೇ ಎಫ್ಐಆರ್ ದಾಖಲಾಗಿಲ್ಲ.

ಸಿ.ಡಿ.ಹಗರಣದಲ್ಲಿ ಭಾಗಿಯಾಗಿದ್ದಾಳೆ ಎನ್ನಲಾದ ಯುವತಿ ಹಾಗೂ ಆಕೆಯ ಜತೆಗೆ ಸಿ.ಡಿ. ಬಹಿರಂಗಗೊಳಿಸುವಲ್ಲಿ ಶಾಮೀಲಾದ ಇಬ್ಬರು ಯುವಕರ ಅಡಗುದಾಣ ಪತ್ತೆ ಮಾಡಿರುವ ಎಸ್ಐಟಿ ಅವರನ್ನು ಗುಪ್ತವಾಗಿ ವಿಚಾರಣೆ ನಡೆಸುತ್ತಿದೆ ಎಂದು ಹೇಳಲಾಗಿದೆ. ಈ ನಡುವೆ ಆರೋಪಿ ಪತ್ರಕರ್ತನ ಪತ್ನಿಗೆ ನೋಟಿಸ್ ಜಾರಿ ಮಾಡಲಾಗಿದ್ದು, ವಿಚಾರಣೆಗೆ ಹಾಜರಾಗುವಂತೆ ತಿಳಿಸಲಾಗಿದೆ.

→7



ಕಾಮಪುರಾಣ

# ಎಸ್ಐಟಿ ತನಿಖೆ ನಿಗೂಢ ಮೊಟ್ಟೆ

ಮೊದಲ ಪುಟದಿಂದ...

ಆದರೆ ತನಿಖೆಯ ಕುರಿತಂತೆ ಹೇಳಿಕೆ ನೀಡಿರುವ ಬೆಂಗಳೂರು ಪೊಲೀಸ್ ಆಯುಕ್ತ ಕಮಲ್ ಪಂತ್, ಪ್ರಕರಣದ ತನಿಖೆ ಸಾಕಷ್ಟು ಪ್ರಗತಿ ಕಂಡಿದೆ. ಆದರೆ ಸದ್ಯದ ಪರಿಸ್ಥಿತಿಯಲ್ಲೂ ಏನೂ ಹೇಳುವಂತಿಲ್ಲ. ಶೀಘ್ರವೇ ಎಲ್ಲ ವಿಷಯ ತಿಳಿಸಲಾಗುವುದು ಎಂದು ಗೋಡೆ ಮೇಲೆ ದೀಪವಿಟ್ಟಂತೆ ಮಾತನಾಡಿದ್ದಾರೆ.

**ರಾಸಲೀಲೆ ಪ್ರಕರಣ**

ಈ ಮಧ್ಯೆ ಎಸಿಪಿ ನಾಗರಾಜ್ ನೇತೃತ್ವದ ಎಸ್ಐಟಿಯ ಒಂದು ತಂಡ ಕುಮಾರಕೃಪಾ ರಸ್ತೆಯಲ್ಲಿರುವ ಖಾಸಗಿ ಜಾಹೀರಾತು ಸಂಸ್ಥೆಯ ಮೇಲೆ ದಾಳಿ ನಡೆಸಿದ್ದು, ಇದೇ ಸಂಸ್ಥೆಯಲ್ಲಿ ವಿವಾದಿತ ಸಿ.ಡಿಯನ್ನು ಎಡಿಟ್ ಮಾಡಲಾಗಿದೆ ಎಂದು ಶಂಕಿಸಲಾಗಿದೆ. ಹೀಗಾಗಿ ಸಂಸ್ಥೆಯಲ್ಲಿನ ಕೆಲವು ಕಂಪ್ಯೂಟರ್, ಹಾರ್ಡ್ ಡಿಸ್ಕ್ ವಶಪಡಿಸಿಕೊಳ್ಳಲಾಗಿದೆ ಎಂದು ಹೇಳಲಾಗಿದೆ.

ವಿಧಾನಮಂಡಲ ಅಧಿವೇಶನ ಕೂಡ ನಡೆಯುತ್ತಿರುವುದರಿಂದ ಇಂದು ಸದನದಲ್ಲಿ ಕಾಂಗ್ರೆಸ್ ಸರ್ಕಾರವನ್ನು ಪೇಚಿಗೆ ಸಿಲುಕಿಸಬಹುದು ಎಂಬ ನಿರೀಕ್ಷೆ ಹುಸಿಯಾಗಿದೆ. ಸಿ.ಡಿ.ಹಗರಣ ಆಡಳಿತಾರೂಢಸರ್ಕಾರದಸಚಿವರಮೇಲೆಯೇಕೇಳಿಬಂದಿದ್ದಲ್ಲದೇ ಆದರ ಬೆನ್ನಲ್ಲೇ ಆರು ಮಂದಿ ಸಚಿವರು ಕೋರ್ಟ್‌ನಿಂದ ತಡೆಯಾಜ್ಞೆ ತಂದಿರುವುದು ಸದನದಲ್ಲಿ ಭಾರಿ ಸದ್ದು ಮಾಡಲಿದೆ ಎಂದೇ ಹೇಳಲಾಗಿತ್ತು. ಆದರೆ ಅಚ್ಚರಿಯ ಬೆಳವಣಿಗೆಯಲ್ಲಿ ಪ್ರತಿಪಕ್ಷ ಕಾಂಗ್ರೆಸ್ ಸಿ.ಡಿ. ಕುರಿತಂತೆ ಸದನದಲ್ಲಿ ಚಕಾರವೆತ್ತಿಲ್ಲ.

ಮಾಜಿ ಸಚಿವ ರಮೇಶ್ ಜಾರಕಿಹೊಳಿ ರಾಜ್ಯದ ಮಹಾನ್ ನಾಯಕರೊಬ್ಬರು ತಮ್ಮ ವಿರುದ್ಧ ಷಡ್ಯಂತ್ರ ರೂಪಿಸಿದ್ದಾರೆ ಎಂದು ಬಹಿರಂಗ ಹೇಳಿಕೆ ನೀಡಿದ್ದರು. ಇದರ ಬೆನ್ನಲ್ಲೇ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಸ್ವತಃ ಹೇಳಿಕೆ ನೀಡಿ, ಸಿ.ಡಿ.ಹಗರಣದಲ್ಲಿ ತಮ್ಮನ್ನು ಟಾರ್ಗೆಟ್ ಮಾಡಲಾಗುತ್ತಿದೆ ಎಂದು ಸರ್ಕಾರದ ವಿರುದ್ಧ ಬಹಿರಂಗ ಆರೋಪ ಮಾಡಿದ್ದರು. ಹೀಗಾಗಿ ಕಾಂಗ್ರೆಸ್ ಸದನದಲ್ಲಿ ಸಿ.ಡಿ.ಹಗರಣ ಪ್ರಸ್ತಾಪಿಸಿದರೆ ಬಿಜೆಪಿ ತಿರುಗಿ ಬೀಳುವ ಸಾಧ್ಯತೆ ಇದೆ ಎನ್ನುವ ಕಾರಣಕ್ಕೆ ಮೌನಕ್ಕೆ ಶರಣಾಗಿದೆ ಎಂದು ಹೇಳಲಾಗುತ್ತಿದೆ.

ತಮ್ಮ ವಿರುದ್ಧದ ಷಡ್ಯಂತ್ರದ ತನಿಖೆ ನಡೆಸುವಂತೆ ಸದಾಶಿವನಗರ ಪೊಲೀಸ್ ಠಾಣೆಯಲ್ಲಿ ಎಫ್ಐಆರ್ ದಾಖಲಿಸಿದ ಮಾಜಿ ಸಚಿವ ರಮೇಶ್ ಜಾರಕಿಹೊಳಿ ಸೋಮವಾರ ದಿನವಿಡೀ ಅಜ್ಞಾತಸ್ಥಳದಲ್ಲಿದ್ದು, ಅವರಸಹೋದರ ಬಾಲಚಂದ್ರ ಜಾರಕಿಹೊಳಿ ಕೂಡ ದೆಹಲಿಯಲ್ಲೇ ಬೀಡು ಬಿಟ್ಟಿದ್ದಾರೆ. ಎಸ್ಐಟಿ ತನಿಖೆ, ಆದರ ಪ್ರಗತಿ ಸೇರಿದಂತೆ ಯಾವುದರ ಬಗ್ಗೂ ಜಾರಕಿಹೊಳಿ ಸಹೋದರರು ಯಾವುದೇ ಪ್ರತಿಕ್ರಿಯೆ ನೀಡಿಲ್ಲ. ಕಾಂಗ್ರೆಸ್ ನಾಯಕ ಶಿವಕುಮಾರ್ ತಮ್ಮನ್ನು ಟಾರ್ಗೆಟ್ ಮಾಡಲಾಗುತ್ತಿದೆ ಎಂಬ ವಿಚಾರಕ್ಕೆ ಸಂಬಂಧಿಸಿದ ಮಾಜಿ ಸಿಎಂ ಎಚ್.ಡಿ.ಕುಮಾರಸ್ವಾಮಿ ಹೇಳಿಕೆ ನೀಡಿ, ತನಿಖೆಯಿಂದ ಸತ್ಯ ಹೊರಬರುವ ತನಕ ಯಾರೂ ತಮ್ಮನ್ನು ತಾವು ದೋಷಿ ಎಂದು ಹೇಳಿಕೊಳ್ಳಬೇಕಿಲ್ಲ ಎಂದು ಕೆಣಕಿದ್ದಾರೆ.